‘ಯಾಕೆ? ನನ್ನನ್ನು ಬಿಡಕ್ಕೆ ಬೇರೆ ಏನು ಕಾರಣ ಕೇಳಬಹುದ?’ ಅಂದಳು.

‘ಹೌದು ನಾನು ಬೇರೆಯವಳನ್ನ ಪ್ರೀತಿಸ್ತೀದೀನಿ’ ಅಂದೆ.

‘ಯಾರೋ... ನಿಮ್ಮನ್ನು ಮರುಳು ಮಾಡಿದ ಮಾಯಾಂಗನೆ?’ ಅಂತ ಕೇಳಿದಳು.

‘ಹೇಮಾ... ನಿನ್ನ ತಂಗೀ ಥರ ಅಂದ್ಯಲ್ಲ ಅವಳೇ’ ಅಂದೆ ಸ್ಪಷ್ಟವಾಗಿ. ಒಂದು ನಿಮಿಷ ಕಂಬನಿ ತುಂಬಿಕೊಳ್ಳುತ್ತಿದ್ದ ಕಣ್ಣೊರಿಸಿಕೊಂಡು,

‘ಮನೇಲಿ ಇಟ್ಕೊಂಡು ಯಜಮಾನ್ಗೆ ಕೊಟ್ರೆ... ಥೂ ನಾಯಿ ಬುದ್ಧಿ’ ಅಂತ ಔಡುಕಚ್ಚಿದಳು.

‘ಮನೇಲಿ ಇಟ್ಕೊಂಡು ಯಜಮಾನ್ಗೆ ಕೊಟ್ಟೀರೋದಲ್ಲ ನಂದನಾ... ಚಾಕರಿ ಮಾಡಿಸ್ಕೊಂಡ್ರಿ, ಅವೆಲ್ಲ ಮಾತು ಬೇಡ. ನಾನವಳನ್ನ ಇವತ್ತೇ ಕರಕೊಂಡು ಹೋಗ್ತಿದೀನಿ’ ಅಂದೆ.

‘ಅವಳು ಹೋದ್ರೆ ನಮ್ಮನೇ ನಡೆಸೋದು ಯಾರು?’ ಅಂದಳು ಅಳುಬುರುಕುದನಿಯಲ್ಲಿ. ಅಷ್ಟರಲ್ಲಿ ರೂಮಿನ ಬಾಗಿಲು ತೆಗೆದು ಓಡಿಬಂದ ಹೇಮಾ, ‘ಭಾವ ಎಂಥ ಕೆಲಸ ಮಾಡಿಬಿಟ್ರಿ, ಅಪ್ಪಾಜಿನ, ಅಕ್ಕನ್ನ ಬಿಟ್ಟು ನಾ ಬರಕ್ಕಾಗುತ್ತಾ?’ ಅಂತ ಹೇಳಿದಾಗ, ‘ಹಾಳಾಗಿ ಹೋಗಿ ಈ ಕರಿ ಮುಸುಡೀನೆ ಕಟ್ಕೊಂಡು ಸಾಯ್ರಿ’ ಎಂದು ಮತ್ತೆ ಅಳುತ್ತಾ, ‘ಒಂದಾರು ತಿಂಗಳು ಅಪ್ಪಾಜೀನ ಸುಧಾರಿಸಿ ಹೋಗೆ ಹೇಮಾ... ಇನ್ಯಾರನ್ನಾದ್ರು ನೋಡ್ಕೊಳ್ಳೋವರೆಗೂ... ನೀವೂ ಅಷ್ಟೆ, ಫ್ಯಾಕ್ಟ್ರೀಗೆ ಏನಾರೂ ಮಾಡಿ’ ಅಂತ ಅತ್ತಳು... ನನಗೂ ಕರುಳುಚುರ‍್ರೆನಿಸಿ, ‘ಹಂಗೆಲ್ಲ ಅತಂತ್ರ ಮಾಡಲ್ಲ ನಂದನಾ. ಬೇರೆ ಎಂ.ಡಿ.ನ ನೇಮಿಸ್ಕೊಳೋವರ್ಗು ನಾನೇ ಇರ್ತೀನಿ’ ಅಂದೆ.

ಆರು ತಿಂಗಳ ಕಾಲದಲ್ಲೂ ಅವರಪ್ಪ ಚೇತರಿಸಿಕೊಳ್ಳಲಿಲ್ಲ. ನಾನು ಎಂ.ಡಿ ಹುದ್ದೆಗೆ ರಾಜೀನಾಮೆ ಕೊಟ್ಟು, ಬೇರೆ ಕಂಪನಿಯಲ್ಲಿ ಕೆಲಸಕ್ಕೆ ಸೇರಿಕೊಳ್ಳಬೇಕೆಂದುಕೊಂಡೆ... ಆದರೆ ಹಾಗೇನೂ ಆಗಲಿಲ್ಲ.

ಆ ದಿನ ನಂದನಾ ಆಫೀಸಿಗೆ ಬಂದಿರಲಿಲ್ಲ. ಎಂ.ಡಿ ಕೆಲಸಕ್ಕೆ ಸೂಕ್ತ ವ್ಯಕ್ತಿಯೊಬ್ಬರನ್ನು ಹುಡುಕಿ ನಂದನಾಳಿಗೆ ಹೇಳಲು ಮನೆಗೆ ಹೋದೆ. ‘ಯಾರು? ನಿಮ್ಮ ಫ್ರೆಂಡ್ ವಾಸುದೇವನಾ?’ ಅಂದಳು. ‘ಹೂಂ, ತುಂಬ ಎಫಿಶಿಯಂಟ್ ಕ್ವಾಲಿಫೈಡ್’ ಅಂದೆ. ‘ಆದ್ರೆ ಮನೇವ್ರು ನೋಡ್ಕೊಂಡಂಗಾಗಲ್ವಲ್ಲ’ ಅಂದಳು ಶಾಂತವಾಗಿ. ‘ನಾನಲ್ಲಿ ಮನೇವನಾಗ್ತೀನಿ ನಂದನಾ? ನಾನಿನ್ನು ಹೊರಟುಬಿಡ್ತೀನಲ್ಲ’ ಅಂದೆ ಅಯೋಮಯವಾಗಿ. ‘ಅದೆಲ್ಲ ಆಗಲ್ಲ ಬಿಡಿ. ನಾನು ನಿಮ್ಮನ್ನು ಎಲ್ಲೂ ಕಳಿಸಲ್ಲ. ಹೇಮಾನ್ನ ಎಲ್ಲೂ ಕಳಿಸಲ್ಲ’ ಅಂದಳು ಅಧಿಕಾರಯುತವಾಗಿ. ನನ್ನ ಕೋಪ ಪಾದರಸದಂತೆ ಏರಿತು. ‘ನೀನು ಯಾರು ಕಳಿಸಕ್ಕೆ? ನಾನು ಅವಳು ಮದ್ವೆ ಮಾಡ್ಕೋಳಕ್ಕೆ ಯಾರು ಅಡ್ಡ ಬರ್ತಾರೆ ನೋಡ್ತೀನಿ’ ಅಂದೆ ಬಿರುಸಾಗಿ. ‘ಅಯ್ಯೋ ನೀವು ಅವಳನ್ನು ಮದ್ವೆ ಮಾಡ್ಕೋಬೇಡಿ ಅಂತ ನಾನೆಲ್ಲಿ ಹೇಳ್ದೆ? ಯೂ ಮ್ಯಾರಿ ಹರ್. ಆದ್ರೆ ಆ ಮೇಲೂ ಅವಳು ಇಲ್ಲೇ ಇರಬೇಕು. ಇರ್ತಾಳೆ ಅಷ್ಟೆ’ ಅಂದಳು. ‘ನನ್ನ ಹೆಂಡ್ತೀನ ನಾ ಯಾರ ಮನೇಲು ಕೆಲಸ ಮಾಡಕ್ಕೆ ಬಿಡಲ್ಲ. ಆ ಕನಸೆಲ್ಲ ಕಾಣಬೇಡ’ ಅಂದೆ. ಅವಳು ಇಷ್ಟೂ ಕೋಪಗೊಳ್ಳದೆ, ‘ನೋಡಿ ನನ್ನ ಮಾತು ಸರಿಯಾಗಿ ಕೇಳಿಸ್ಕೋಳ್ಳಿ, ಅವಳು ನನ್ನ ತಂಗಿ ಇದ್ದಹಾಗೆ ಅಂತಿದ್ದೆನಲ್ಲ... ನಿಜವಾಗ್ಲೂ ಅವಳು ತಂಗೀನೆ. ನಮ್ಮಪ್ಪನ ಮಗಳೇ ಅವಳು; ಅಮ್ಮ ಬೇರೆ ಅಷ್ಟೆ. ಹಾಗಂತ ಹೇಳಕ್ಕಾಗಲ್ಲವಲ್ಲ ಎಲ್ಲಾರ ಹತ್ರಾನು... ಇಲ್ಲೇ ಹುಟ್ಟಿದ್ದಾಳೆ, ಬೆಳೆದಿದ್ದಾಳೆ. ಏನೋ ಅದಕ್ಕೆ ವಿದ್ಯೆ ಹತ್ತಲಿಲ್ಲ. ಹಂಗಾಗಿ ಮನೆ ನಿಭಾಯಿಸ್ಕೊಂಡು ಹೋಗ್ತೀದ್ದಾಳೆ. ನೀವು ಅವಳನ್ನೇ ಕಟ್ಕೊಂಡು ನೆಮ್ಮದಿಯಾಗಿ ಇಲ್ಲೇ ಬಂದಿರಿ. ಫ್ಯಾಕ್ಟ್ರೀನೂ ನೀವೇ ನೋಕ್ಕೊಳಿ ಆದ್ರೆ... ಒಂದೇ ಒಂದು ಕಂಡೀಷನ್ನು’ ಅಂದಳು. ನಾನು ‘ಏನು?’ ಅಂದಾಗ ‘ಈಗ ನೀವು ನನ್ನನ್ನು ಮದ್ವೆ ಮಾಡ್ಕೊಳ್ಳದಿದ್ರೆ ನಮ್ಮಪ್ಪಂಗೆ ಎದೆ ಒಡೆದೋಗುತ್ತೆ. ಅವರು ಸಾಯೋ ಕಾಲಕ್ಕೆ ಯಾಕೆ ನೋವು ಕೊಡೋದು ಅಂತ. ನನ್ನ ಮದ್ವೆ ಮಾಡ್ಕೊಳಿ, ನಾಮಕಾವಸ್ಥೆಗೆ ಅಷ್ಟೆ. ನಮ್ಮಪ್ಪನ ಕಣ್ಣೊರಸಕ್ಕೆ. ಆ ಮೇಲೆ ನಿಮ್ಮ ಪಾಡಿಗೆ ನೀವು ಅವಳ ಜೊತೆ ಸಂಸಾರ ಮಾಡಿಕೊಂಡಿರಿ’ ಅಂದಳು ನಿರುದ್ವಿಗ್ನವಾಗಿ.